ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1085(1424)
ಸದಸ್ಯರ ಹೆಸರು : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)
ಉತ್ತರಿಸುವ ಸಚಿವರು : ಶ್ರೀ ಎನ್.ಚಲುವರಾಯಸ್ವಾಮಿ (ಸಾರಿಗೆ ಸಚಿವರು.)

ಅ) ಸಾರಿಗೆ ಇಲಾಖೆಯಲ್ಲಿ ಬೇರೆ ಇಲಾಖೆಯಿಂದ ಬಂದ (ಸೂಪರನ್ಯೂಮರಿ ಹುದ್ದೆ) ದ್ವಿ.ದ.ಸ.ಹುದ್ದೆಯ ದಿನಗೂಲಿ ನೌಕರರು ಎಷ್ಟು?

ಸುಮಾರು 41 ನೌಕರರು (ಸೂಪರನ್ಯೂಮರರಿ) ಬೇರೆ ಇಲಾಖೆಯಿಂದ ದ್ವಿ.ದ.ಸ.ರಾಗಿ ಸಾರಿಗೆ ಇಲಾಖೆಯಲ್ಲಿ ನೇಮಕಗೊಂಡಿರುತ್ತಾರೆ.

ಆ) ಇವರಿಗೆ ದ್ವಿ.ದ.ಸ. ಹುದ್ದೆಯಿಂದ ಪ್ರ.ದ.ನ. ಹುದ್ದೆಗೆ ಬಡ್ತಿ ನೀಡಿರುವುದು ನಿಜವೇ?

ಇಲ್ಲ.

ಇ) ಇಲಾಖೆಯ ಆಯುಕ್ತರಿಗೆ ಬಡ್ತಿ ನೀಡಲು ಅಧಿಕಾರವಿದೆಯೇ?

ಇಲಾಖೆಯಲ್ಲಿನ ಗ್ರೂಪ್-ಸಿ ಮತ್ತು ಡಿ ಹುದ್ದೆಯ ನೌಕರರಿಗೆ ಬಡ್ತಿ ನೀಡಲು ಸಾರಿಗೆ ಆಯುಕ್ತರಿಗೆ ಅಧಿಕಾರವಿರುತ್ತದೆ.

ಈ) ಕೆಲಸಕ್ಕೆ ಸೇರಿದಾಗಿನಿಂದಲೂ ಸಾರಿಗೆ ಆಯುಕ್ತರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ಯಾರು ಯಾರು ಹಾಗೂ ಅವರನ್ನು ವರ್ಗಾವಣೆ ಮಾಡದಿರಲು ಅಧಿಕಾರವಿದೆಯೇ?

1) ಪ್ರ.ದ.ಸ. – 10 ಜನ
2) ದ್ವಿ.ದ.ಸ – 06 ಜನ
3) ವಾ.ಚಾಲಕರು – 03 ಜನ
4) ಬೆರಳಚ್ಚುಗಾರರು – 11 ಜನ

ವರ್ಗಾವಣೆಗಾಗಿ ಅರ್ಹರಿರುವ ನೌಕರರ ಪಟ್ಟಿಯನ್ನು ಇಲಾಖಾ ವೃಂದ ನಿರ್ವಹಣಾ ಪ್ರಾಧಿಕಾರದ ಮುಂದೆ ಮಂಡಿಸಿದಾಗ, ಈ ನೌಕರರಿಗೆ ಸಂಬಂಧಿಸಿದಂತೆ ವರ್ಗಾವಣೆ ಶಿಫಾರಸ್ಸು ಮಾಡಿರುವುದಿಲ್ಲ.

ಉ) ಪ್ರಾದೇಶಿಕ ಸಾರಿಗೆ ಕಛೇರಿ ಜಯನಗರದಲ್ಲಿ, ಆಟೋರಿಕ್ಷಾ ಪರವಾನಿಗೆಯಲ್ಲಿ ಅವ್ಯವಹಾರ ನಡೆದಿರುವುದು ನಿಜವೇ?

ಇಲ್ಲ.

ಊ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು?

ಉದ್ಭವಿಸುವುದಿಲ್ಲ.

ಋ) ಆಯುಕ್ತರ ಕಛೇರಿಯಲ್ಲಿ ಹೊಸ ವಾಹನಗಳಿಗೆ ಹೊಸ ನಂಬರ್ ಕೊಡುವುದು ನಿಜವೇ?

ಆಯುಕ್ತರ ಕಛೇರಿಯಲ್ಲಿ ಹೊಸ ವಾಹನಗಳಿಗೆ ವಿಶೇಷ ನೋಂದಣಿ ಸಂಖ್ಯೆಗಳನ್ನು ಮಾತ್ರ ನೀಡಲಾಗುತ್ತದೆ.

ಎ) ಹಾಗಿದ್ದಲ್ಲಿ ಒಂದು ನಂಬರ್‌ಗೆ 25,000–00 ರೂ.ಗಳನ್ನು ಕಟ್ಟಿದರೂ ಸಹ ಕಡತಗಳ ವಿಲೇವಾರಿಯಲ್ಲಿ ಒಂದು ತಿಂಗಳಾಗುತ್ತಿದೆ ಈ ವಿಳಂಬವಾಗಲು ಕಾರಣವೇನು?

ವಿಶೇಷ ಸಂಖ್ಯೆಯನ್ನು ಹಂಚಿಕೆ ಮಾಡಿದ ನಂತರ ಶುಲ್ಕ ರೂ.25,000/– ಗಳನ್ನು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಪಾವತಿಸಬೇಕಾಗಿರುತ್ತದೆ. ಕಡತಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1086(1425)
ಸದಸ್ಯರ ಹೆಸರು : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯ ಹೆದ್ದಾರಿ ಕೆ.ಐ.ಎಸ್.ಪಿ.ಯೋಜನೆಯಲ್ಲಿ ಅಭಿವೃದ್ಧಿಪಡಿಸಿರುವ ಶಕ್ತಿ ನಗರ ದಿಂದ ಬೂದಗುಂಪ ಕ್ರಾಸ್‌ನವರೆಗೆ ರಾಜ್ಯ ಹೆದ್ದಾರಿಯನ್ನು–23 ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಕಾರ್ಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1087(1426)
ಸದಸ್ಯರ ಹೆಸರು : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ಮಂಜೂರಾಗಿರುವ 220 ಕೆ.ವಿ. ವಿದ್ಯುತ್ ನಿರ್ವಹಣೆ ಕೇಂದ್ರದ ಕಾಮಗಾರಿಗಳು ಯಾವ ಹಂತದಲ್ಲಿದೆ;

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ಒಂದು 220 ಕೆ.ವಿ.ವಿದ್ಯುತ್ ವಿತರಣಾ ಕೇಂದ್ರವು ಮಂಜೂರಾಗಿರುತ್ತದೆ. ಸದರಿ ವಿದ್ಯುತ್ ವಿತರಣಾ